ಸಾಕ್ಷಿಯನ್ನು ದಿನಾಂಕ 31-08-2023 ರಂದು ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ ಎಸ್ ಬಿ ವಕೀಲರಿಂದಃ**

ವೀರಭದ್ರಪ್ಪರವರ ಮಗ ಚೆನ್ನಪ್ಪ ಎಂದರೆ ನಿಜ. ಚನ್ನಪ್ಪ ನನ್ನ ಗಂಡನ ಖೊಟ್ಟಿ ಸಹಿ ಮಾಡಿ ದಾಖಲೆ ಹುಟ್ಟಿಸಿ ಭೂಸ್ವಾಧೀನದ ರೊಕ್ಕ ಕೋರ್ಟಿನಿಂದ ಪಡೆದುಕೊಂಡಿದ್ದ ಎಂದರೆ ನಿಜ. ಆತ ನ್ಯಾಯಾಲಯಕ್ಕೂ ಆ ಬಗ್ಗೆ ಮೋಸ ಮಾಡಿದ್ದ ಎಂದರೆ ನಿಜ. ಆ ಬಗ್ಗೆ ಆತನ ವಿರುದ್ಧ ನ್ಯಾಯಾಲಯದಲ್ಲಿ ಒಂದು ಕೇಸ್ ಆಗಿತ್ತು ಎಂದರೆ ನಿಜ. ಅದೇ ರೀತಿ ಖೊಟ್ಟಿ ಸಹಿ ಮಾಡಿ ಆಸ್ತಿಯನ್ನು ಕೂಡ ಪಡೆದುಕೊಳ್ಳಲು ಆತ ಪ್ರಯತ್ನಪಟ್ಟಿದ್ದ ಎಂದರೆ ನಿಜ. ಚೆನ್ನಪ್ಪ ಆದೇ ರೀತಿ ದಾಖಲೆಗಳನ್ನು ಸೃಷ್ಟಿ ಮಾಡಿ ಎಲ್ಲರ ಆಸ್ತಿಗಳನ್ನು ಹೊಡೆಯಲು ಪ್ರಯತ್ನ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆತ ನಮ್ಮ ಮನೆತನದಲ್ಲಿ ಬಹಳ ಮಂದಿಗೆ ಮೋಸ ಮಾಡಿ ಆಸ್ತಿ ಹೊಡೆಯಲು ಪ್ರಯತ್ನಪಟ್ಟಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಚೆನ್ನಪ್ಪ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಡಿ ನನ್ನ ವಿರುದ್ಧ ಪ್ರತಿಪಾದನೆ ಮಾಡಿದ್ದಾನೆ ಎಂದರೆ ಆ ರೀತಿ ಮಾಡಿದ್ದರು ಕೂಡ ನನಗೆ ಆಸ್ತಿಯಲ್ಲಿ 1/5 ನೇ ಅಂಶದ ಹಿಸ್ಸೆ ಬರಬೇಕು ಎಂದು ನುಡಿಯುತ್ತೇನೆ. ಅದು ವೀರಭದ್ರಪ್ಪನ ಆಸ್ತಿಯಲ್ಲಿ ನಾನು ಕೇಳುತ್ತಿರುವುದು ಎಂದರೆ ನಿಜ. ಪರಪ್ಪನ ಆಸ್ತಿಯಲ್ಲಿ ಆ ರೀತಿ ನಾನು ಕೇಳುತ್ತಿರುವುದು ಅಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಪರಪ್ಪನ ಹಿಸ್ಸೆಗೆ ಬಂದಿದ್ದ ಸ್ವತ್ತುಗಳು ಎಂದರೆ ನನ್ನ ಮಾವ ವೀರಭದ್ರಪ್ಪರವರ ಹೆಸರಿನ ಆಸ್ತಿಗಳಿಗೆ ಮಾತ್ರ ನಾವು ಕೇಸ್ ಹಾಕಿದ್ದು ಎಂದು ನುಡಿಯುತ್ತೇನೆ. ಬಸಪ್ಪನ ಹಿಸ್ಸೆಗೆ ಅಥವಾ ಪರಪ್ಪನ ಹಿಸ್ಸೆ ಬಗ್ಗೆ ನಮಗೆ ಹಿತಾಸಕ್ತಿ ಇಲ್ಲ ಎಂದರೆ ಹೇಳಲು ಗೊತ್ತಿಲ್ಲ. ಚೆನ್ನಪ್ಪ ದಾಖಲೆಗಳನ್ನು ಸೃಷ್ಟಿ ಮಾಡಿ ಅಸ್ತಿ ಹೊಡೆದುಕೊಳ್ಳಲು ಪ್ರಯತ್ನಪಟ್ಟಿದ್ದಾನೆ ಎಂಬುದು ನನಗೆ ಗೊತ್ತಿದೆ ಎಂದರೆ ಆತ ಪ್ರಯತ್ನಪಟ್ಟಿದ್ದರೂ ಕೂಡ ಆತ ನನ್ನ ಮಾವ ಹಾಗೂ ಆಸ್ತಿಯಲ್ಲಿ ನನಗೆ 1/5 ನೇ ಹಿಸ್ಸೆ ಹಕ್ಕು ಇದೆ ಹಾಗೂ ನಮ್ಮ ಹಿಸ್ಸೆ ಬೇಕು ಎಂದು ನುಡಿಯುತ್ತೇನೆ. ಆತ ನನ್ನ ಮಾವ ಎಂಬ ಕಾರಣದಿಂದ ಆತನನ್ನು ರಕ್ಷಣೆ ಮಾಡಲು ಪ್ರಯತ್ನ ಪಡುತ್ತಿದ್ದೇನೆ ಎಂದರೆ ಮನೆತನದ ಗೌರವವನ್ನು ನನ್ನ ಮಾವನೇ ಉಳಿಸಿಕೊಡಬೇಕೆಂದು ನುಡಿಯುತ್ತೇನೆ. ಚೆನ್ನಪ್ಪ ನಮ್ಮ ಅಸ್ತಿಯನ್ನು ಕಸಿದುಕೊಳ್ಳುತ್ತಾನೆ ಎಂದು ನಮಗೆ ಭಯ ಇದೆ ಎಂದರೆ ಆ ರೀತಿ ಇಲ್ಲ ನಮ್ಮ

ಆಸ್ತಿ ನಮಗೆ ಬರಬೇಕು ಎಂದು ನುಡಿಯುತ್ತೇನೆ. ಅದಕ್ಕಾಗಿ ನಾನು ಚೆನ್ನಪ್ಪನಿಗೆ ಸಪೋರ್ಟ ಮಾಡುತ್ತೇನೆ ಎಂದರೆ ಅವರು ನಮ್ಮ ಮನೆಯ ಸದಸ್ಯರು ಎಂದು ನುಡಿಯುತ್ತೇನೆ. ಚೆನ್ನಪ್ಪ ನಮಗೆ ಕೆಟ್ಟದ್ದು ಮಾಡಿದರೂ ಕೂಡ ಮನೆತನದ ಗೌರವಕ್ಕಾಗಿ ನಾನು ಚೆನ್ನಪ್ಪನಿಗೆ ಸಪೋರ್ಟ ಮಾಡುತ್ತೇವೆ ಎಂದರೆ ಮನೆತನದ ಗೌರವವೇ ಮುಖ್ಯ ಎಂದು ನುಡಿಯುತ್ತೇನೆ.

**ಮರುವಿಚಾರಣೆ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.